ಪಕ್ಕದಲ್ಲಿದ್ದ ಆ ತಾಯಿ ತನ್ನ ಮಗನನ್ನು ಕಳೆದುಕೊಂಡ ನೋವಿನಲ್ಲಿ ನೆಲಕ್ಕೇ ಕುಸಿದುಬಿದ್ದಿದ್ದಳು. ಅವಳನ್ನು ಎಬ್ಬಿಸಲು ಮುಂದಾದವರು ಕ್ಷಣಕಾಲ ಎಲ್ಲ ಮರೆತವರಂತೆ ಅವಳನ್ನೇ ನೋಡುತ್ತಾ ನಿಂತುಬಿಟ್ಟರು. ಕಣ್ಣೆದುರಿನ ದಟ್ಟ ಕಾಡು ಈಗ ಮರಗಳ ಸಮೂಹದ ಬದಲು ಸಾವಿನ ಬಲೆಯಂತೆ ಕಾಣತೊಡಗಿತು. ತಮ್ಮ ಮಕ್ಕಳೂ ಅದೇ ಕಾಡಿನ ಅಂಧಕಾರದೊಳಗೆ ಲೀನವಾದರೆ ಎಂಬ ಆಲೋಚನೆಯಿಂದ ಒಳಗೊಳಗೇ ನಡುಗುತ್ತಿದ್ದರು. ಆ ಕ್ಷಣದಲ್ಲಿ ಯಾರಿಗೂ ಯಾರ ಮಾತು ಕೇಳಿಸಲಿಲ್ಲ. ಒಬ್ಬಳು ತನ್ನ ಕಣ್ಣೀರನ್ನು ಒರೆಸಿಕೊಳ್ಳುತ್ತಾ, ದೂರದ ಕಾಡಿನ ದಿಕ್ಕಿನತ್ತ ನೋಡಿದಳು, ಇನ್ನೊಬ್ಬ ಮೌನವಾಗಿ ತನ್ನ ಮಕ್ಕಳಿಗಾಗಿ ಪ್ರಾರ್ಥಿಸುತ್ತಿದ್ದನು. ಧೈರ್ಯ ತುಂಬಬೇಕಾದ ತುಟಿಗಳು ಆತಂಕದಿಂದ ಬೀಗ ಜಡಿದುಕೊಂಡಿದ್ದವು. ಅವಳ ಅಳುವಿನ ಶಬ್ದ ಖಾಲಿ ಮನೆಗಳಲ್ಲಿ ಪ್ರತಿಧ್ವನಿಸುವಂತೆ ಎಲ್ಲರೊಳಗನ್ನೂ ಆವರಿಸುತ್ತಿತ್ತು.

ಪದಗಳನ್ನು ಮರೆತು ಅಸಹಾಯಕರಾಗಿ ನಿಂತ ಅವರೆಲ್ಲರ ಯೋಚನೆಯನ್ನು ಕತ್ತರಿಸುತ್ತ ಆಕೆ ಏಕಾಏಕಿ ಎದ್ದು ನಿಂತು ಮಗನ ಹೆಸರನ್ನು ಕೂಗುತ್ತಾ ‘ನಾನೂ ಬರುತ್ತೇನೆ’ ಎಂದು ಕಾಡಿನ ದಾರಿಯತ್ತ ಓಡತೊಡಗಿದಳು. ಓಡುತ್ತಾ, ಓಡುತ್ತಾ ಕುಸಿದು ಬಿದ್ದಳು. ಕಣ್ಣೆದುರೇ ಅನಿರೀಕ್ಷಿತವಾಗಿ ನಡೆದ ಸತ್ಯವನ್ನು ಅರಗಿಸಿಕೊಳ್ಳಲಾಗದೆ, ಅವರೆಲ್ಲರೂ ಅವಳ ಬಳಿ ಓಡಿ ಬರುವಷ್ಟರಲ್ಲಿ ಅವಳ ಪ್ರಾಣಪಕ್ಷಿ ಮಗನನ್ನು ಅರಸುತ್ತ ಹಾರಿಹೋಗಿತ್ತು. ಅಲ್ಲಿದ್ದವರ

